<u>ದಿನಾಂಕಃ **25-03-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್ ಎ ಎಸ್ ವಕೀಲರಿಂದಃ</u>

ನಾನು 2005 ರಲ್ಲಿ ಗ್ರೀನ್ ಬಯೋಟೆಕ್ ಅಂಗಡಿಯಲ್ಲಿ ನಾನು ಸೇಲ್ಸ್ ಮ್ಯಾನೇಜರ್ ಆಗಿ ಕೆಲಸಕ್ಕೆ ಸೇರಿರುತ್ತೇನೆ. ಸದರಿ ಗ್ರೀನ್ ಬಯೋಟೆಕ್ ಕಂಪನಿ ಪ್ರಾರಂಭವಾದಾಗ ನಾನು ಅಕೌಂಟ್ ಮ್ಯಾನೇಜರ್ ಆಗಿ ಕೆಲಸಕ್ಕೆ ಸೇರಿರುತ್ತೇನೆ. ನಾನು ಗ್ರೀವನ್ ಡಿಸೋಜಾ ಇವರು ಕೆಲಸ ಬಿಟ್ಟ ನಂತರ ಅಕೌಂಟ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿರುತ್ತೇನೆ. ನಾನು ಅಕೌಂಟ್ ಮ್ಯಾನೇಜರ್ ಆಗಿ ಕೆಲಸ ಮಾಡುವ ಸಂಬಂಧ ನನ್ನ ನೇಮಕಾತಿ ಪತ್ರ ಇರುವುದಿಲ್ಲ. ನಾನು ಅಕೌಂಟ್ ಮ್ಯಾನೇಜರ್ ಆಗಿ ಕೆಲಸ ಮಾಡುವ ಪೂರ್ವದಲ್ಲಿ ಏನೇನು ವ್ಯವಹಾರಗಳು ಆಗಿರುತ್ತವೆ ಎಂಬ ಬಗ್ಗ ಮಾಹಿತಿ ಇದೆಯೇ ಎಂದರೆ ಸಾಕ್ಷಿ ಮಾಹಿತಿ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ನನಗೆ ಗ್ರೀವನ್ ಡಿಸೋಜಾ ಇವರು ನಮ್ಮ ಕಂಪನಿಯ ಪರವಾಗಿ ಏನೇನು ವ್ಯವಹಾರ ಮಾಡಿರುತ್ತಾರೆ ಎಂಬುದರ ಬಗ್ಗ ಮಾಹಿತಿ ಇರುತ್ತದೆ.

2. ನನ್ನ ಪ್ರಮಾಣ ಪತ್ರದಲ್ಲಿ ಗ್ರೀವನ್ ಡಿಸೋಜಾ ಇವರು ನಮ್ಮ ಕಂಪನಿಯ ಪರವಾಗಿ ಮತ್ತು ಆರೋಪಿಯ ಜೊತೆ ಏನೇನು ವ್ಯವಹಾರ ಮಾಡಿರುತ್ತಾರೆ ಎಂಬುದರ ಬಗ್ಗ ಹೇಳಿರುವುದಿಲ್ಲ. ನಮ್ಮ ಕಂಪನಿ ಯಾವಾಗ ನೋಂದಾವಣೆ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಮ್ಮ ಕಂಪನಿಗೆ ಬಯೋ ಪ್ರಾಡಕ್ಟ್ ಗಳನ್ನು ತಯಾರಿಸಲು ಯಾವಾಗ ಪರವಾನಿಗೆ ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. 2009 ರಿಂದ ಬಯೋ ಪ್ರಾಡಕ್ಟ್ ವಸ್ತುಗಳನ್ನು ನಮ್ಮ ಕಂಪನಿಯಲ್ಲಿ ತಯಾರಿಸುತ್ತಾ ಇರುತ್ತಾರೆ. ನಿಪಿ 9 ರಲ್ಲಿ ನಮೂದಿಸಿದ ಬಯೋ ಕ್ಯೂರ್ ಎಂಬ ವಸ್ತು ಅಡಿಕೆಗೆ ಸಿಂಪಡಿಸುವ ಲಿಕ್ವಿಡ್ ಇರುತ್ತದೆ. ಸದರಿ ಬಯೋ ಕ್ಯೂರ್ ಪ್ರಾಡಕ್ಟ್ ಅನ್ನು ತಯಾರಿಸಲು ನಮ್ಮ ಕಂಪನಿಗೆ ಯಾವ ವರ್ಷ ಪರವಾನಿಗೆ ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. 2017 ರಿಂದ ಆರೋಪಿಗೆ ಬಯೋ ಕ್ಯೂರ್ ಪ್ರಾಡಕ್ಟ್ ಗಳನ್ನು ಸರಬರಾಜು ಮಾಡಿರುತ್ತೇವೆ. ಸದರಿಯವರಿಗೆ ಸದರಿ ಪ್ರಾಡಕ್ಟ್ ಅನು ಸರಬರಾಜು ಮಾಡಿದ ಬಗ್ಗ ಇನ್ವಾಯ್ಸ್ ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಇರಬಹುದು, ಹುಡುಕಬೇಕು ಎಂದು ಉತ್ತರಿಸಿರುತ್ತಾರೆ. ಸಾಕ್ಷಿ ಮುಂದುವರಿದು ನಮ್ಮ ಕಚೇರಿಯನ್ನು ಬದಲಾಯಿಸಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ನಿಪಿ 9 ರ ದಾಖಲೆ ನಮ್ಮ ಕಚೇರಿಯ ಸಿಸ್ಟಂ ನಲ್ಲಿ ಇದ್ದು ಅದನ್ನು ತಂದು ಹಾಜರುಪಡಿಸಿರುತ್ತೇನೆ.

3. ಆರೋಪಿಗೆ ನಾವು ಇಂತಿಷ್ಟು ವಸ್ತುಗಳನ್ನು ಸರಬರಾಜು ಮಾಡಿದ ಸಂಬಂಧ ಅವರಿಂದ ಸಹಿ ಪಡೆದ ಸ್ವೀಕೃತಿಗಳು ನಮ್ಮ ಬಳಿ ಇದ್ದು ಅವುಗಳನ್ನು ಹಾಜರುಪಡಿಸಬಹುದು. ನಾವು ಆರೋಪಿಗೆ ವಸ್ತುಗಳನ್ನು ಸರಬರಾಜು ಮಾಡಬೇಕಾದರೆ ಒಂದು ವಾಹನದಲ್ಲಿ ಅಥವಾ

ಪಾರ್ಸಲ್ ಮೂಲಕ ಕಳುಹಿಸಬೇಕು ಎಂದರೆ ಸರಿ . ನಾನು ಹಾಜರುಪಡಿಸಿರುವ ನಿಪಿ 9 ರಲ್ಲಿ ಯಾವ ರೀತಿ ವಸ್ತುಗಳನ್ನು ಸರಬರಾಜು ಮಾಡಲಾಗಿದೆ ಎಂಬ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ . ನಮ್ಮ ಕಂಪನಿಯಲ್ಲಿ ಅಧಿಕೃತ ಪ್ರಾಡಕ್ಟ್ ಗಳನ್ನು ಹೊರತುಪಡಿಸಿ ಬೇರೆ ವಸ್ತುಗಳನ್ನು ತಯಾರಿಸಲು ಮತ್ತು ಮಾರಾಟ ಮಾಡಲು ಅನುಮತಿ ಇರುವುದಿಲ್ಲ ಎಂದರೆ ಸರಿ. ನಮ್ಮ ಕಂಪನಿಗೆ ಸಂಪೂರ್ಣ ಹಾಗೂ ಸಿ ಎಂ ಎಸ್ ಪ್ರಾಡಕ್ಟ್ ಗಳನ್ನು ತಯಾರಿಸಲು ಅನುಮತಿ ಕೊಟ್ಟಿರುವ ಬಗ್ಗೆ ದಾಖಲೆ ನೋಡಿರುತ್ತೇನೆ. ಸದರಿ ವಸ್ತುಗಳನ್ನು ತಯಾರಿಸಲು ಕೃಷಿ ಇಲಾಖೆ ಇವರು ಅನುಮತಿ ನೀಡಿರುತ್ತಾರೆ, ಆದರೆ ಯಾವ ವರ್ಷ ಎಂದು ನೆನಪಿರುವುದಿಲ್ಲ. ನಮ್ಮ ಕಂಪನಿಯಲ್ಲಿ ಕಳಪೆ ಗುಣಮಟ್ಟದ ವಸ್ತುಗಳನ್ನು ತಯಾರಿಸುತ್ತಾರೆ ಎಂದು ಆ ಸಂಬಂಧ ಕೃಷಿ ಅಧಿಕಾರಿಗಳು ಕ್ರಿಮಿನಲ್ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸಿರುತ್ತಾರೆ. ನಾನು ಇದ್ದ ಕಾಲದಲ್ಲಿ ಕೃಷಿ ಅಧಿಕಾರಿಗಳು ನಮ್ಮ ಕಂಪನಿಗೆ ದಿಡೀರ್ ಧಾಳಿ ಮಾಡಿ ವಸ್ತುಗಳನ್ನು ಅಮಾನತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಪ್ರಜಾವಾಣಿ ಪತ್ರಿಕೆಯ ಪ್ರತಿ ತೋರಿಸಲಾಗಿ ಸದರಿ ದಾಖಲೆಯ ಪ್ರಕಾರ ಕೃಷಿ ಇಲಾಖೆಯ ಅಧಿಕಾರಿಗಳು ನಮ್ಮ ಕಚೇರಿಗೆ ಭೇಟಿ ನೀಡಿ ತಪಾಸಣೆ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ವಾಟರ್ ಸಾಲ್ಯುಬಲ್ ಪ್ರಾಡಕ್ಟ್ ಲೈಸೆನ್ಸ್ ಅವಧಿ ಮುಗಿದಿದ್ದು, ಆ ಸಂದರ್ಭದಲ್ಲಿ ಬಂದಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಸಾಕ್ಷಿಯು ಸದರಿ ಪತ್ರಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ 1 ಎಂದು ಗುರುತಿಸಲಾಯಿತು. ಸದರಿ ವಿಚಾರವಾಗಿ ಕ್ರಿಮಿನಲ್ ಪ್ರಕರಣ ದಾಖಲಾಗಿತ್ತು ಎಂದರೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ.

4. ವಾಟರ್ ಸಾಲ್ಯುಬೆಲ್ ಪ್ರಾಡಕ್ಟ್ ನ ಮಾರಾಟ ಮಾಡುವ ಪರವಾನಿಗೆ ಮುಗಿದಿದ್ದು, ಆ ಸಂಬಂಧ ಕೃಷಿ ಅಧಿಕಾರಿಗಳು ನಮ್ಮ ಕಂಪನಿಗೆ ಭೇಟಿ ನೀಡಿರುತ್ತಾರೆ. ನಮ್ಮ ಕಂಪನಿಯಲ್ಲಿ ಪರವಾನಿಗೆ ಮುಗಿದ ವಸ್ತುಗಳನ್ನು ಮಾರಾಟ ಮಾಡುತ್ತಿದ್ದೇವೆ ಎಂದರೆ ಸಾಕ್ಷಿಯು ವಾಟರ್ ಸಾಲ್ಯುಬಲ್ ಪ್ರಾಡಕ್ಟ್ ನ ಪರವಾನಿಗೆ ಮುಗಿದಿದ್ದು ಅದೊಂದನ್ನು ಮಾತ್ರ ಮಾರಾಟ ಮಾಡುತ್ತಿದ್ದೆವು ಎಂದು ಉತ್ತರಿಸಿರುತ್ತಾರೆ. ಆರೋಪಿಗೆ ನಮ್ಮ ಕಂಪನಿಯಿಂದ ತಯಾರಾದ ಪ್ರಾಡಕ್ಟ್ ಗಳು ಹಾಗೂ ಬೇರೆ ಕಂಪನಿಯಿಂದ ಎಷ್ಟು ಪ್ರಾಡಕ್ಟ್ ಗಳನ್ನು ಮಾರಾಟ ಅಥವಾ ಸರಬರಾಜು ಮಾಡಿರುತ್ತೇವೆ ಎಂದು ನನಗೆ ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ನಿಪಿ 9 ನ್ನು ನಾವೇ ನಮ್ಮ ಕಂಪನಿಯಲ್ಲಿ ತಯಾರಿಸಿ ಹಾಜರುಪಡಿಸಿದ ದಾಖಲೆ ಇರುತ್ತದೆ ಎಂದರೆ ಸಾಕ್ಷಿ ಅವರ ಅಕೌಂಟ್ ಎಕ್ಸ್-ಟ್ರ್ಯಾಕ್ಟ್ ನ ಪ್ರತಿ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ನಿಪಿ 9 ರಲ್ಲಿ ನಾವು ಸರಬರಾಜು ಮಾಡಿದ್ದೇವೆ ಎಂದು ಹೇಳುವ ಪ್ರಾಡಕ್ಟ್ ಗಳನ್ನು ಮಾರಾಟ ಮಾಡುವ ಪರವಾನಿಗೆ ನಮ್ಮ ಬಳಿ ಇತ್ತು. 2015-16 ನೇ ಇಸವಿಯಲ್ಲಿ ನಮ್ಮ ಸಂಸ್ಥೆಯಿಂದ ಸರಬರಾಜು ಮಾಡಿದ ಕಳಪೆ ಗುಣಮಟ್ಟದ ಸರಕುಗಳು ಮಾರಾಟವಾಗದೇ ಪುನಃ ನಮ್ಮ

ಕಂಪನಿಗೆ ವಾಪಾಸು ಕಳುಹಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ.

5. ಆರೋಪಿಗೆ ನಮ್ಮ ಕಂಪನಿಯಿಂದ ಎಷ್ಟು ಸರಕುಗಳನ್ನು ಸರಬರಾಜು ಮಾಡಿರುತ್ತೇವೆ ಮತ್ತು ಅವರು ಎಷ್ಟು ಸರಕುಗಳನ್ನು ಪುನಃ ನಮ್ಮ ಕಂಪನಿಗೆ ವಾಪಾಸು ಮಾಡಿರುತ್ತಾರೆ ಎಂಬುದರ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ, ಆದರೆ 2020 ರ ನಂತರ ವಾಪಾಸು ಕಳುಹಿಸಿದ ಸರಕುಗಳ ಬಗ್ಗೆ ಮಾಹಿತಿ ಇರುತ್ತದೆ. ಯಾವುದೇ ಗ್ರಾಹಕರು ನಮ್ಮ ಕಂಪನಿಗೆ ಸರಕನ್ನು ವಾಪಾಸು ಕೊಟ್ಟಾಗ ನಾವು ಪಡೆದು ಅವರಿಗೆ ಸ್ವೀಕೃತಿ ಕೊಡುವ ಪದ್ಧತಿ ಇರುತ್ತದೆ ಎಂದರೆ ಸರಿ. ಈ ರೀತಿ ನಾವು ಸರಕನ್ನು ವಾಪಾಸು ಪಡೆದ ಬಗ್ಗೆ ಅದಕ್ಕೆ ಸಂಬಂಧಪಟ್ಟ ಸ್ವೀಕೃತಿ ನಮ್ಮ ಕಚೇರಿಯಲ್ಲಿ ಇರುತ್ತದೆ ಎಂದರೆ ಸಾಕ್ಷಿ ಇರುತ್ತದೆ, ಹುಡುಕಬೇಕು ಎಂದು ಉತ್ತರಿಸಿರುತ್ತಾರೆ. ಆರೋಪಿಯು ಈ ಪ್ರಕರಣದಲ್ಲಿ ಎಷ್ಟು ಸರಕುಗಳನ್ನು ವಾಪಾಸು ಕೊಟ್ಟಿರುತ್ತಾರೆ ಎಂಬ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ, ಆದರೆ ದಾಖಲೆ ಇರುತ್ತದೆ. ದಿನಾಂಕಃ17.10.2026 ರಂದು ಆರೋಪಿಯ ತಮ್ಮಕಚೇರಿಗೆ ಸರಕುಗಳನ್ನು ವಾಪಾಸು ಪಡೆದುಕೊಂಡು ಸ್ವೀಕೃತಿ ಕೊಡುವಂತೆ ಲೆಟರ್ ಕಳುಹಿಸಿರುತ್ತಾರೆ ಎಂದರೆ ಸಾಕ್ಷಿ ಅದು ನಮಗೆ ಬಂದಿರುವುದಿಲ್ಲ ಹಾಗೂ ಅದು ಅವರ ಲೆಟರ್ ಹೆಡ್ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ನನಗೆ ಗ್ರೀವನ್ ಇವರು ಒಂದು ವರ್ಷದ ಹಿಂದೆ ಆರೋಪಿಯ ಕಡೆಯಿಂದ ಯಾವುದೇ ವಸ್ತುಗಳು ವಾಪಾಸು ಬಂದಿರುವುದಿಲ್ಲ ಎಂದು ಹೇಳಿದ್ದು, ಆ ಕಾರಣದಿಂದ ನಾನು ಯಾವುದೇ ವಸ್ತುಗಳನ್ನು ನಮ್ಮ ಕಂಪನಿ ಸ್ವೀಕರಿಸಿಲ್ಲ ಎಂದು ಹೇಳುತ್ತಿದ್ದೇನೆ.

6. ನಮ್ಮ ಕಂಪನಿಯಿಂದ ಯಾವುದೇ ಸರಕುಗಳನ್ನು ಖರೀದಿ ಮಾಡಿದರೆ ಬಿಲ್ ಬುಕ್ ನಲ್ಲಿ ನಮೂದು ಮಾಡುತ್ತೇವೆ ಎಂದರೆ ಸರಿ. ಸದರಿ ಬಿಲ್ ಬುಕ್ ನ ಮೂಲ ಪ್ರತಿ ಖರೀದಿಸಿರುವವರಿಗೆ ಹಾಗೂ ಇನ್ನೊಂದು ಪ್ರತಿ ನಮ್ಮ ಬಳಿ ಇರುತ್ತದೆ ಎಂದರೆ ಸರಿ. ನಾವು ಆರೋಪಿಗೆ ಎಷ್ಟು ಮೊತ್ತದ ಸರಕುಗಳನ್ನು ಸರಬರಾಜು ಮಾಡಿರುತ್ತೇವೆ ಎಂಬುದರ ಬಗ್ಗೆ ಬಿಲ್ ಬುಕ್ ಗಳನ್ನು ಹಾಜರುಪಡಿಸಬಹುದು ಎಂದರೆ ಸಾಕ್ಷಿ ಆಫೀಸ್ ಬದಲಾಯಿಸಿದ್ದೇವೆ, ಹುಡುಕಬೇಕು ಎಂದು ಉತ್ತರಿಸಿರುತ್ತಾರೆ. ನಾನು ಯಾವ ಅವಧಿಯಿಂದ ಯಾವ ಅವಧಿಯವರೆಗೆ ಸರಕುಗಳನ್ನು ಆರೋಪಿಗೆ ಸರಬರಾಜು ಮಾಡಿರುತ್ತೇವೆ ಎಂಬ ಬಗ್ಗೆ ಗ್ರೀವನ್ ಇವರನ್ನು ಕೇಳಿರುವುದಿಲ್ಲ.

7. ನಮ್ಮ ಕಂಪನಿಯಲ್ಲಿ ತಯಾರಾದ ನೈಸರ್ಗಿಕ ಗೊಬ್ಬರದ ಗುಣಮಟ್ಟವನ್ನು ಪರಿಶೀಲನೆ ಮಾಡಲು ಗೊಬ್ಬರ ನಿಯಂತ್ರಣ ಅಧಿಕಾರಿ ಇದ್ದು, ನಮ್ಮ ಕಂಪನಿಯ ಎಂ ಡಿ ಇರುತ್ತಾರೆ. ವಿರಾಜ್ ಕಲ್ಪೇಶ್ ದೇಸಾಯಿ, ತಾಶ್ವಿ ಕೆಮಿಕಲ್ಸ್, ಅಹಮದಾಬಾದ್ , ಗುಜರಾತ್,

ಇವರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ರಸಗೊಬ್ಬರ ತಯಾರಾದ ನಂತರ ಸಂಬಂಧಿಸಿದ ಅಧಿಕಾರಿಯು ನೀಡಿದ ಗುಣಮಟ್ಟದ ಪ್ರಮಾಣಪತ್ರದ ಆಧಾರದ ಮೇಲೆ ಮಾರಾಟ ಮಾಡುವ ಅಧಿಕಾರ ಇರುತ್ತದೆ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಮ್ಮ ಕಂಪನಿಯಲ್ಲಿ ತಯಾರಾದ ರಸಗೊಬ್ಬರ ಕಳಪೆ ಗುಣಮಟ್ಟದ್ದು ಎಂದು ಸಿಸಿ ಪ್ರಕರಣ ಸಂಖ್ಯೆ 664/2019 ರಂತೆ ದಾಖಲಾಗಿತ್ತು ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ನಮ್ಮ ಕಂಪನಿಯ ವಿರುದ್ದ ಸಾಕಷ್ಟು ಜನರು ಕಳಪೆ ಗುಣಮಟ್ಟದ ಸರಕುಗಳನ್ನು ಮಾರಾಟ ಮಾಡುತ್ತಾರೆ ಎಂದು ಕೃಷಿ ಅಧಿಕಾರಿಗಳಿಗೆ ದೂರು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಅದೇ ರೀತಿ ರೈತರು ಸಹ ನಮ್ಮ ಕಂಪನಿಯ ವಿರುದ್ಧ ದೂರು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕಃ22.10.2019 ರಂದು ಕೃಷಿ ಅಧಿಕಾರಿಗಳು ನಮ್ಮ ಅಂಗಡಿಯಲ್ಲಿ ಕಳಪೆ ಗುಣಮಟ್ಟದ ವಸ್ತುಗಳನ್ನು ಅಮಾನತುಪಡಿಸಿಕೊಂಡು ರಾಸಾಯನಿಕ ವಿಶ್ಲೇಷಣಾ ವರದಿಗಾಗಿ ಮಂಡ್ಯಕ್ಕೆ ಕಳುಹಿಸಿಕೊಟ್ಟಿರುತ್ತಾರೆ ಎಂದರೆ ಗೊತ್ತಿರುವುದಿಲ್ಲ. ನಂತರ ರಾಸಾಯನಿಕ ವಿಶ್ಲೇಷಣಾ ವರದಿಯ ಪ್ರಕಾರ ನಮ್ಮ ಕಂಪನಿಯು ನಿಗದಿತ ಗುಣಮಟ್ಟದ ವಸ್ತುಗಳನ್ನು ತಯಾರಿಸಿರುವುದಿಲ್ಲ ಎಂದು ವರದಿ ಬಂದಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಈ ರೀತಿ ವರದಿ ಬಂದ ನಂತರ ನಮ್ಮ ಕಂಪನಿಯ ಸರಬರಾಜುಗಳು ಮಾರಾಟ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 9 ರಲ್ಲಿ ತೋರಿಸಿದ ಸಂಪೂರ್ಣ ಕೆಮಿಕಲ್ ಇದು ನೀರಿನಲ್ಲಿ ಹಾಕಿ ಗಿಡಕ್ಕೆ ಹಾಕುವ ಔಷಧಿ ಇರುತ್ತದೆ.

(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು , ಸಮಯ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ